ಏನು ಘೋಷಿಸಿದ್ದೀರಿ, ಅದನ್ನು ಬದಲಾವಣೆ ಮಾಡಿಕೊಡಬೇಕು. ಮತ್ತು ಕೆನಾಲ್ ಲೈನಿಂಗ್ ಮಾಡಿಕೊಡಬೇಕು. ಸಂಪೂರ್ಣವಾಗಿ ಪೂರ್ಣ ನೀರಾವರಿ ಮಾಡುವುದಕ್ಕೆ ಸಾಧ್ಯತೆ ಇದೆಯೆಂದು ಹೇಳಿ ಕೆನಾಲ್ ಲೈನಿಂಗ್‌ಗೋಸ್ಕರ ಆಸ್ಪದ ಮಾಡಿಕೊಟ್ಟು ಸಂಪೂರ್ಣ ನೀರಾವರಿ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಈಗ ಕೊಡತಕ್ಕಂಥ ನೀರಿನ ಪ್ರಮಾಣವೇ ನಮಗೆ ಸಾಕಾಗಿದೆ. ಮಳೆ ಆಶ್ರಯದಲ್ಲಿ ನಾವು ಸಂಪೂರ್ಣ ತರಿ ಬೆಳೆಯನ್ನು ಬೆಳೆಯುತ್ತಿದ್ದೇವೆ. ಆ ಮಳೆ ನೀರು ಕೂಡ ಇವತ್ತು ಸಾಕಷ್ಟು ಇರುವುದರಿಂದ ನಾವು ತರಿ ಬೆಳೆ ಬೆಳೆಯುವುದಕ್ಕೆ ಆಸ್ಪದ ಮಾಡಿಕೊಡಬೇಕು ಅಧ್ಯಕ್ಷರ ಮೂಲಕ ಮಾನ್ಯ ಭಾರಿ ನೀರಾವರಿ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಜಯಣ್ಣನವರು ಕೇಳಿರತಕ್ಕಂಥ ವಿಚಾರ ಏನು ಎಂದರೆ,-

(ಮಾನ್ಯ ಅಧ್ಯಕ್ಷರು ತಮ್ಮ ಸ್ಥಾನದಲ್ಲಿ ಉಪಸ್ಥಿತರಾದರು)

ಸೆಮಿಡ್ರೈ ಕ್ರಾಪ್ ಇದೆ, ಅದನ್ನು ನಾವು ಫುಲ್ ವೆಟ್ ಕ್ರಾಪ್ ರೀತಿ ಮಾಡಿಕೊಡಬೇಕು, ಡಿಫ್ಯೂಟ್ 41 ರಿಂದ 62ವರೆಗೆ ಎಂದು ಹೇಳಿದ್ದಾರೆ. ಆದರೆ ಇಲ್ಲಿ ಎರಡು ವಿಚಾರಗಳು ಇವೆ. ಜಯಣ್ಣ ಅವರಿಗೆ ಗೊತ್ತಿರುವಹಾಗೆ ಈ ನಾಲೆಯಲ್ಲಿ ಅನೇಕ ಕಿರಿಗಳು ಇವೆ. ಆ ಕಮಾಂಡ್ ಏರಿಯಾ ಕೂಡ ಇದೆ. ಆದರೆ ಈ ಯೋಜನೆಯ ಅಚ್ಚುಕಟ್ಟಿನಲ್ಲಿ ಕೆನಲ್ ಬಹಳ ಕಿಮ್ಮುಹೋಗಿದೆ. 25 ವರ್ಷಕ್ಕೆ ಒಂದು ಸಾರಿ ಕೆನಾಲ್ ರಿಪೇರಿ ಮಾಡದೇ ಹೋದರೆ ಸಿಸ್ಟಮ್ ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ 30 ಪರ್ಸೆಂಟ್ ನೀರು ಪೋಲಾಗುತ್ತಿದೆ ಎನ್ನತಕ್ಕಂಥ ನಮಗೆ ಬಂದಿರತಕ್ಕಂಥ ಮಾಹಿತಿ. ಆದ್ದರಿಂದ ನಾನು ಒಂದು ಯೋಚನೆ ಏನು ಮಾಡುತ್ತೇನೆ ಎಂದರೆ ಒಬ್ಬರು ಚೀಫ್ ಇಂಜಿನಿಯರ್‌ನ್ನು ಕಳಿಸಿ, ಇಬ್ಬರು- ಮೂವರು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳನ್ನು ಹಾಕಿ ಕೆನಾಲ್ ರಿಪೇರಿ ಯಾವ ಪ್ರಮಾಣದಲ್ಲಿ ಆಗಬೇಕು, ನೀರಿನ ಲಭ್ಯತೆ ಎಷ್ಟು ಇದೆ, ಅದು ಎಷ್ಟು ಅಚ್ಚುಕಟ್ಟು ಆಗುತ್ತದೆ, ಈಗ ಇರತಕ್ಕಂಥ ಅಚ್ಚುಕಟ್ಟು ಏನು, ಕ್ರಾಪ್ ಫ್ಯಾಕ್ಟರ್ ಯಾವುದು, ಅದಕ್ಕೆ ಸೆಮಿಡ್ರೈ ಎಷ್ಟು ಮಾಡಬಹುದು ಮತ್ತು ಫುಲ್ ವೆಟ್ ಮಾಡುವ ಬಗ್ಗೆ ತೀವ್ರ ಪರಿಶೀಲನೆಯನ್ನು ಮಾಡಲಾಗುವುದು.

ಅಧ್ಯಕ್ಷರು :— ಜಯಣ್ಣನವರೇ, ನೀವು ಬೇರೆ ಏನಾದರೂ ಕೇಳಬೇಕೇ?

ಶ್ರೀ ಎಸ್. ಜಯಣ್ಣ :— ಕೊಟ್ಟಂತಹ ಉತ್ತರ ಸಮಂಜಸವಾಗಿದೆ.

ಜಯನಗರ ಕ್ಷೇತ್ರದ ಲಳ್ಳಂದ್ರ ಕ್ವಾರಿ ಜಾಗದ ಬತ್ತುವರಿ.

198(1355) ಶ್ರೀ ರಾಮಲಿಂಗಾರೆಡ್ಡಿ, (ಜಯನಗರ) :— ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಯನಗರ ವಿಧಾನಸಭಾ ಕ್ಷೇತ್ರದ ಲಳ್ಳಂದ್ರ ಕ್ವಾರಿ ಜಾಗವು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ಹಾಗಿದ್ದಲ್ಲಿ, ಈ ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ಖಾಲಿ ಮಾಡಿಸದೇ ಇರಲು ಕಾರಣಗಳೇನು?

ಇ) ಈ ಜಾಗವನ್ನು ಖಾಲಿ ಮಾಡಿಸಿ ಇದನ್ನು ಸಂರಕ್ಷಿಸಲು ಸರ್ಕಾರದವರು ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ವಿ. ಸೋಮಣ್ಣ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು) :—

ಅ) ಬಂದಿದೆ.

ಆ) ವಿಭಾಗ 62ರ ಲಕ್ಷಸಂದ್ರ ಕ್ವಾರಿ ಜಾಗವನ್ನು ಗುಡಿಸಲು ನಿವಾಸಿಗಳು ಒತ್ತುವರಿ ಮಾಡಿಕೊಂಡಿದ್ದು ಈ ಜಾಗವನ್ನು ಸದರಿ ನಿವಾಸಿಗಳಿಗೆ ಪರ್ಯಾಯ ಜಾಗ ಕಂಡುಕೊಂಡ ನಂತರ ಖಾಲಿ ಮಾಡಿಸಲಾಗುವುದು.

ಇ) ಹೌದು.

ಶ್ರೀ ರಾಮಲಿಂಗಾರೆಡ್ಡಿ :— ಈ ಪ್ರದೇಶದಲ್ಲಿ ಕ್ವಾರಿ ಜಾಗ ಸುಮಾರು 10 ಎಕರೆ ಇರಬಹುದು. ಈ ಕ್ವಾರಿ ಹಿಂದೆ ಬಿ.ಡಿ.ಎ.ನಲ್ಲಿತ್ತು. ಈಗ ಅವರು ಕಾರ್ಪೊರೇಷನ್‌ಗೆ ಹ್ಯಾಂಡ್‌ಓವರ್ ಮಾಡಿದ್ದಾರೆ. ಕಾರ್ಪೊರೇಷನ್‌ನಲ್ಲಿ ಕೂಡ ಹಿಂದೆ ಒಂದು ಉದ್ಯಾನವನ ಮಾಡಬೇಕು, ಇಲ್ಲವೆಂದರೆ ಸ್ಪೇಡಿಯಂ ಮಾಡಬೇಕು ಎನ್ನತಕ್ಕಂಥ ಕಾರ್ಯಕ್ರಮ ಇತ್ತು. ಆದರೆ, ಅದು ಯಾವುದನ್ನೂ ಮಾಡಿಲ್ಲ. ಈಗ ಸುತ್ತಲೂ ಇರತಕ್ಕಂಥವರು ಒತ್ತುವರಿ ಮಾಡುತ್ತಿದ್ದಾರೆ. ಈ ಒತ್ತುವರಿಯನ್ನು ನಿಲ್ಲಿಸಿ ಎಂದು ಹೇಳಿ ಪ್ರತಿ ಅಧಿವೇಶನದಲ್ಲಿ ಕೂಡ ನಾನು ಪ್ರಶ್ನೆ ಕೇಳುತ್ತಲೇ ಬಂದಿದ್ದೇನೆ. ಆದರೆ ಒತ್ತುವರಿ ಅಂತೂ ನಿಂತಿಲ್ಲ. ಅಲ್ಲಿ ಫೆನ್ಸಿಂಗ್ ಹಾಕಿ ಎಂದು ಬಹಳಷ್ಟು ಸಲ ಒತ್ತಾಯ ಕೂಡ ನಾನು ಮಾಡಿದ್ದೇನೆ. ಇಲ್ಲಿ ಮಾಡಿದ್ದೇನೆ ಮತ್ತು ಕಾರ್ಪೊರೇಷನ್ ಅಧಿಕಾರಿಗಳ ಹತ್ತಿರ ಕೂಡ ಮಾತನಾಡಿದ್ದೇನೆ. ಸಂಬಂಧಪಟ್ಟ ಎಲ್ಲರ ಗಮನಕ್ಕೆ ತಂದಿದ್ದೇನೆ.ಈ ಒತ್ತುವರಿಯನ್ನು ನಿಲ್ಲಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಸೋಮಣ್ಣ :— ಈ ಲಕ್ಷಸಂದ್ರ ಕ್ವಾರಿಯಲ್ಲಿ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ 25 ಗುಡಿಸಲುಗಳು ಅಲ್ಲಿ ಇದೆ ಎಂದು ಕೊಳಚೆ ನಿರ್ಮೂಲನ ಮಂಡಳಿಯವರು ಐಡೆಂಟಿಫೈ ಮಾಡಿದ್ದಾರೆ. ಅಲ್ಲಿ ಸುತ್ತಲೂ ಆಗಿರತಕ್ಕಂಥ ಒತ್ತುವರಿಯನ್ನು ತೆಗೆದುಹಾಕುವುದಕ್ಕೆ ತೀರ್ಮಾನ ಮಾಡಿ ಎರಡನೇ ತಾರೀಖು ಬೆಳಿಗ್ಗೆ ಮಾನ್ಯ ವಿಧಾನಸಭಾ ಸದಸ್ಯರಾದ ರಾಮಲಿಂಗಾರೆಡ್ಡಿಯವರು, ನಾವು, ಅಧಿಕಾರಿಗಳು ಹೋಗಿ ಎಲ್ಲರೂ ಸ್ಥಳಕ್ಕೆ ಭೇಟಿ ಇತ್ತು ಅವತ್ತೇ ತಮ್ಮ ಸಮಕ್ಷಮದಲ್ಲಿ ಕುಳಿತುಕೊಂಡು ಅದಕ್ಕೆ ಫೆನ್ಸ್ ಮಾಡುವುದಕ್ಕೆ ಸರ್ಕಾರದಿಂದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ತೀರ್ಮಾನ ಮಾಡುತ್ತೇವೆ.